# 3 ನೇ ಅಧಿಕ ಜಿಲ್ಲಾ ಮತ್ತ ಸತ್ರ ನ್ಯಾಯಾಲಯ, ತುಮಕೂರು.

## Spl.C. 25/2014

ಚಾ.ಸಾ.14

ಫ್ರಾ.ಸಾ.5

ದಿನಾಂಕಃ 24-07-2019 ರಂದು, ಗೌರವಾನ್ವಿತ ಉಚ್ಚನ್ಯಾಯಾಲಯದಿಂದ ಪ್ರಕಟಣೆ ಮಾಡಿರುವ ಅಧೀನ ನ್ಯಾಯಾಲಯದ ಎಸ್.ಓ.ಪಿ ಯಲ್ಲಿ ಸಾಕ್ಷಿಯು ಸರ್ಕಾರಿ ಅಧಿಕಾರಿಯಾಗಿರುವುದರಿಂದ ಸಾಕ್ಷಿಯವರನ್ನು ನ್ಯಾಯಾಲಯದಲ್ಲಿ ಪಡೆದುಕೊಳ್ಳಲು ಅನುಮತಿ ನೀಡಿರುವುದರಿಂದ ದಿನಾಂಕ: 25-09-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಜಿ.ನಂಜಪ್ಪ |
| ತಂದೆಯ ಹೆಸರು | : | ಲೇಟ್ ಗಣನಾಥಪ್ಪ |
| ವಯಸ್ಸುಃ | | 63 ವರ್ಷ |
| ಉದ್ಯೋಗ | : | ನಿವೃತ್ತ ತಹಶೀಲ್ದಾರರು. |
| ವಾಸ: | : | ಗೌರಿಬಿದನೂರು. |

ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದ:

ನಾನು ದಿನಾಂಕಃ 12-9-2013 ರಿಂದ ದಿನಾಂಕಃ 7-1-2014 ರವರೆಗೆ ತುರುವೇಕೆರೆ ತಾಲ್ಲೂಕು ತಹಶೀಲ್ದಾರನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣದ ತನಿಖಾಧಿಕಾರಿಗಳ ಕೋರಿಕೆಯ ಮೇರೆಗೆ, ದಿನಾಂಕಃ 5-11-2013 ರಂದು ಚಾಸಾಃ 1 ರವರ ಜಾತಿ ದೃಡೀಕರಣ ಪತ್ರವನ್ನು ನೀಡಿರುತ್ತೇನೆ. ನನ್ನ ವರದಿಯಂತೆ ಅವರು ಪರಿಶಿಷ್ಟ ಜಾತಿಯ ಆದಿದ್ರಾವಿಡ ಜನಾಂಗಕ್ಕೆ ಸೇರಿದವರಾಗಿರುತ್ತಾರೆ. ಸದರಿ ದಾಖಲೆಯನ್ನು ನಿಪಿ.6 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

ನಾನು ಆರಕ್ಷಕ ಉಪಾಧೀಕ್ಷಕರ ಕೋರಿಕೆಯಮೇರಗೆ ದಿನಾಂಕಃ 5-11-2013 ರಂದು, ಬಿ.ಸಿ.ಕಾವಲ್ ಸ.ನಂ.158 ರ ಜಮೀನಿನ ಮಾಲೀಕತ್ವದ ಬಗ್ಗೆ ವಿವರಣೆ ಕೇಳಿದ್ದು ನಾನು ಈ ಬಗ್ಗೆ ವಿವರಣೆಯನ್ನು ನೀಡಿರುತ್ತೇನೆ. ಸದರಿ ವರದಿಯಂತೆ ಬಿ.ವಿ.ಸುರಪುರ ರವರು ಮಾಲೀಕರಾಗಿದ್ದು ಸ್ವಾದೀನದಲ್ಲಿರುತ್ತಾರೆ. ಸದರಿ ದಾಖಲೆಯನ್ನು ನಿಪಿ.7 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ.ಎ.ಆರ್.ಯು . ವಕೀಲರಿಂದ:</u>

ನಿಪಿ.6 ನ್ನು ರಾಜಸ್ವ ನಿರೀಕ್ಷಕರ ವರದಿ ಆಧಾರದ ಮೇಲೆ ನಾನು ನೀಡಿದ್ದೇನೆ. ರಾಜಸ್ವ ನಿರೀಕ್ಷಕರ ವರದಿಯನ್ನು ಕಚೇರಿಯ ಕಡತದಲ್ಲಿ ಇಟ್ಟಿರುತ್ತೇವೆ. ತನಿಖಾಧಿಕಾರಿಗಳು ಅದನ್ನು ಪಡೆದುಕೊಂಡಿಲ್ಲ. ನಾನು ಖುದ್ದು ಚಾಸಾಃ 1 ರವರು ಯಾವ ಜಾತಿಗೆ ಸೇರಿದ್ದಾರೆ ಎಂದು ಪರಿಶೀಲನೆ ಮಾಡಿಲ್ಲ ಎಂದರೆ ಸರಿ.

ನಿಪಿ.5 ರಲ್ಲಿ ಅಸಲು ದಾವೆ ಸಂಖ್ಯೆ ೫೯/೯೮ ತುರುವೇಕರೆ ಸಿವಿಲ್ ನ್ಯಾಯಾಲಯದಲ್ಲಿ ಸ್ವತ್ತಿನ ಸಂಬಂಡ ಇರುವ ಬಗ್ಗೆ ನಮೂದು ಮಾಡಲಾಗಿದೆ ಎಂದರೆ ಸರಿ.

ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಿ ನಿಮ್ಮ ಕಚೇರಿಯಿಂದ ಸದರಿ ದಾಖಲೆಗಳನ್ನು ನೀಡಲಾಗಿದೆಯೇ ಎಂದು ಪ್ರಶ್ನಿಸಲಾಗಿ ಸಾಕ್ಷಿಯು ನಮ್ಮ ಕಚೇರಿಯಿಂದ ಗ್ರೇಡ್-2 ತಹಶೀಲ್ದಾರರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನಿಡಿ.2 ಮತ್ತು 3 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ.7 ರಲ್ಲಿ ತಾವುನಮೂದು ಮಾಡಿರುವಂತೆ ಅಸಲು ದಾವೆ ಸಂಖ್ಯೆ ೧೦೮೦/೨೦೧೨ ರಂತೆ ಯಾವುದೇ ದಾವೆ ದಾಖಲಾಗದಿದ್ದರೂ ಸುಳ್ಳು ಸೃಷ್ಟಿ ಮಾಡಲಾಗಿದೆ ಎಂದು ಪ್ರಶ್ನಿಸಲಾಗಿ ಸಾಕ್ಷಿಯು ಕಂದಾಯ ಅಧಿಕಾರಿಗಳ ವರದಿಯ ಮೇರೆಗೆ ನೀಡಲಾಗಿದೆ ಎಂದು ನುಡಿಯುತ್ತಾರೆ. ಆ ವರ್ಷದಲ್ಲಿ 384 ಅಸಲುದಾವೆಗಳು ಮಾತ್ರ ತುರುವೇಕೆರೆ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ದಾಖಲಾಗಿವೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.7 ರಲ್ಲಿ ನಾನು ನಮೂದು ಮಾಡಿರುವಂತೆ ದಿನಾಂಕಃ 19-5-2012 ರಂದು ಅರ್ಜಿದಾರರಿಗೆ ಸ್ವಾದೀನ ಬಿಡಿಸಿಕೊಟ್ಟಿರುವ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿಗಳಿಗೆ ನೀಡಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿಯು ಕಚೇರಿಯಲ್ಲಿ ಪರಿಶೀಲಿಸಬೇಕು ಎಂದು ನುಡಿಯುತ್ತಾರೆ. ಬಿ.ವಿ.ಸುರಪುರ ರವರು ಸ.ನಂ.158 ರಲ್ಲಿ ಸ್ವಾದೀನ ಇರುವ ಬಗ್ಗೆ ನಾನು ತನಿಖೆ ಮಾಡಿಲ್ಲ. ನಾನು ಪಹಣಿಯಂತೆ ನಮೂದು ಮಾಡಿದ್ದೇನೆ.

ಉಪ ವಿಭಾಗಾಧಿಕಾರಿಗಳು, ತಿಪಟೂರು ರವರು ಬಿ.ಸಿ ಕಾವಲ್ ನ ಸ.ನಂ. ೧/೧೫೮ ಮತ್ತು ೧/೫೮ ಸ್ಥಳಕ್ಕೆ ಬೇಟಿ ಸರ್ವೆ ನಡೆಸಲು ನೀಡಿರುವ ತಿಳುವಳಿಕೆಯನ್ನು ಸಾಕ್ಷಿಯು ಗುರುತಿಸಿದ ಕಾರಣ ಅದನ್ನು ನಿಡಿ.4 ಎಂದು ಗುರುತಿಸಲಾಯಿತು. ನಿಪಿ.7 ನ್ನು ಯಾವುದೇ ದಾಖಲೆಗಳನ್ನು ಪರಿಶೀಲಿಸದೇ ಸುಳ್ಳಾಗಿ ನೀಡಲಾಗಿದೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ ೧೦೮೦/೨೦೧೨ ಎಂದುನಿಪಿ.7 ರಲ್ಲಿ ಸುಳ್ಳಾಗಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ - ಇರುವುದಿಲ್ಲ.</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಎಂದು ಒಪ್ಪಿರುತ್ತಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ತುಮಕೂರು.**